ಚಿಕ್ಕದೇವಮ್ಮನ ಬೆಟ್ಟಕ್ಕೆ ರಸ್ತೆಯಂ ನಿರ್ಮಾಣ

೧೧೫೫. ಶ್ರೀ ಎಂ. ಶಿವಣ್ಣ (ಹೆಗ್ಗಡ ದೇವನ ಕೋಟೆ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ಜಿಲ್ಲೆ ಹೆಚ್. ಡಿ. ಕೋಟೆ ತಾಲ್ಲೂಕು ಸರಗೂರು ಹೋಬಳಿಯ ಚಿಕ್ಕದೇವಮ್ಮನ ಬೆಟ್ಟಕ್ಕೆ ರಸ್ತೆ ಮಾಡಿಸಲು ೧೯೮೬-೮೭ನೇ ಆಯವ್ಯಯದಲ್ಲಿ ೫ ಲಕ್ಷ ರೂಪಾಯಿ ಮಂಜೂರಾತಿ ನೀಡಿರುವುದು ನಿಜವೆ ?

ಆ) ಈ ವಿಚಾರದಲ್ಲಿ ಅರಣ್ಯ ಇಲಾಖೆಯವರು ಈ ಪ್ರದೇಶವನ್ನು ತಮ್ಮ ವ್ಯಾಪ್ತಿಗೆ ಸೇರಿದೆ ಎಂದು ತಡೆಹಿಡಿದಿರುವುದು ನಿಜವೆ ?

ಇ) ಈ ರಸ್ತೆಯು ಅತ್ಯಾವಶ್ಯಕವಾಗಿರುವುದರಿಂದ ರಸ್ತೆ ಮಾಡಲು ಈ ಭೂಮಿಯನ್ನು ಅರಣ್ಯ ಇಲಾಖೆ ಬಿಟ್ಟು ಕೊಡಬೇಕೆಂದು ಮನವಿಗಳು ಬಂದಿವೆಯೆ ಈ ಬಗ್ಗೆ ಅರಣ್ಯ ಇಲಾಖೆ ಕೈಗೊಂಡಿರುವ ಕ್ರಮವೇನು ?

ಶ್ರೀ ಜಿ. ಎಸ್. ಬಾಗಲುಕೋಟ್ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಹೌದು.

ಆ) ರಸ್ತೆ ನಿರ್ಮಿಸಲು ಗುರುತಿಸಿರುವ ಪ್ರದೇಶವು ಅರಣ್ಯ ಜಮೀನಾಗಿದ್ದು ಅರಣ್ಯ ಸಂರಕ್ಷಣಾ ಅಧಿನಿಯಮ, ೧೯೮೦ರ ಪ್ರಕಾರ ಕೇಂದ್ರ ಸರ್ಕಾರದ ಪೂರ್ವಾನುಮತಿಯಿಲ್ಲದ ಕಾರಣ ತಡೆಹಿಡಿಯಲಾಗಿದೆ.

ಇ) ಹೌದು.

ಸೂಕ್ತ ಮಾಹಿತಿಯನ್ನು ಸಂಗ್ರಹಿಸಿದ ನಂತರ ಭಾರತ ಸರ್ಕಾರದ ಪೂರ್ವಾನುಮತಿಯನ್ನು ಪಡೆಯಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಎಂ. ಶಿವಣ್ಣ. ಹೆಚ್.ಡಿ. ಕೋಟೆ ತಾಲ್ಲೂಕಿನಲ್ಲಿ ಮಾತ್ರವಲ್ಲದೆ ಇಡೀ ಜಿಲ್ಲೆಯಲ್ಲಿಯೇ ದೊಡ್ಡ ಬೆಟ್ಟ ಇದು. ಇದರಲ್ಲಿ ಪವಿತ್ರ ದೇವಸ್ಥಾನ ಕೂಡ ಇದೆ. ಕಳೆದ ಸಾಲಿನಲ್ಲಿ ಇಲ್ಲಿ ರಸ್ತೆ ನಿರ್ಮಾಣಕ್ಕೆಂದು ಲೋಕೋಪಯೋಗಿ ಸಚಿವರು ಅನುಮತಿ ಕೊಟ್ಟಿದ್ದರು ಅಂತಹ ಸಂದರ್ಭದಲ್ಲಿ ಈಗ ಮಾನ್ಯ ಅರಣ್ಯ ಮಂತ್ರಿಗಳು ಕೇಂದ್ರ ಸರಕಾರದ ಪೂರ್ವಾನುಮತಿ ಪಡೆಯಬೇಕೆಂದು ಉತ್ತರ ಕೊಟ್ಟಿದ್ದಾರೆ. ಕೇಂದ್ರ ಸರಕಾರದಿಂದ ಪೂರ್ವಾನುಮತಿ ಪಡೆಯಬೇಕಾದರೆ ಇದು ಯಾವ ರೀತಿಯ ಅರಣ್ಯ ಪ್ರದೇಶವೆಂದು ಹೇಳಬೇಕಲ್ಲ.

ಶ್ರೀ ಜಿ.ಎಸ್. ಬಾಗಲಕೋಟೆ.—ಮಾನ್ಯ ಸದಸ್ಯರು ಕೇಳಿದಂತಹ ರಸ್ತೆ ಎನಿದೆ ಅದು ಸುಮಾರು ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿದೆ. ೧೯೮೦ರ ಕೇಂದ್ರ ಅರಣ್ಯ ಸಂರಕ್ಷಣಾ ಅಧಿನಿಯಮದ ಪ್ರಕಾರ ಅರಣ್ಯ ಜಮೀನನ್ನು ಅರಣ್ಯೇತರ ಉದ್ದೇಶಕ್ಕೋಸ್ಕರ ಕೊಡಬೇಕಾದರೆ ಕೇಂದ್ರ ಸರಕಾರದ ಪೂರ್ವಾನುಮತಿಬೇಕು. ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗಿದೆ ಈ ಬಗ್ಗೆ ಆದಷ್ಟು ತೀವ್ರವಾಗಿ ಕ್ರಮ ಕೈಗೊಳ್ಳಲು ಕೇಂದ್ರ ಸರಕಾರಕ್ಕೆ ತಿಳಿಸುತ್ತೇನೆ. ಈ ಬಗ್ಗೆ ಸೂಚನೆ ಕಳಿಸಲಿಕ್ಕೆ ಕೇಂದ್ರ ಸರಕಾರಕ್ಕೆ ವಿನಂತಿಸುತ್ತೇನೆ.

ಶ್ರೀ ಎಂ. ಶಿವಣ್ಣ.—೧೯೭೮ಕ್ಕಿಂತ ಮುಂಚೆ ಇದ್ದಂತಹ ಅರಣ್ಯ ಪ್ರದೇಶವನ್ನು ಅಕ್ರಮವಾಗಿ ರೈತರು ಸಾಗುವಳಿ ಮಾಡಿದಂಥದ್ದನ್ನು ಸಕ್ರಮಗೊಳಿಸಿದ್ದೀರಿ. ರಸ್ತೆ ಮಾಡುವುದಕ್ಕೆ ಅವಕಾಶ ಕೊಡದೇ ಇರುವುದು ಸರಿಯಲ್ಲ. ಅಧಿಕಾರಿಗಳು ಮಂತ್ರಿಗಳಿಂದ ಇಂತಹ ಉತ್ತರವನ್ನು ಹೊಳಿಸುತ್ತಾರೆ. ಅಲ್ಲಿ ಕೋಟ್ಯಾಂತರ ರೂಪಾಯಿಗಳ ವಜ್ರವನ್ನು ಸಾಗಿಸುತ್ತಾರೆ. ಕೇವಲ ಸಣ್ಣ ರಸ್ತೆ ಮಾಡಿ ಕೊಡುವ ಬಗ್ಗೆ ಅಧಿಕಾರಿಗಳು ನಿಮ್ಮಿಂದ ಈ ರೀತಿಯ ಉತ್ತರವನ್ನು ಹೇಳಿಸುವುದು ಸರಿಯಲ್ಲ. ಸೂಕ್ತ ಅಲ್ಲ. ಕೇಂದ್ರ ಸರಕಾರದಿಂದ ಅನುಮತಿಯನ್ನು ಇದಕ್ಕೆ ಪಡೆಯಬೇಕಾದ ಅವಶ್ಯಕತೆ ಇಲ್ಲ. ಮಾನ್ಯ ಸಚಿವರು ಇದನ್ನು ಪುನರ್‌ವಿಮರ್ಶೆ ಮಾಡಬೇಕು. ಅಧಿಕಾರಿಗಳಿಗೆ ಸೂಚನೆ ಕೊಟ್ಟು ರಾಜ್ಯ ಮಟ್ಟದಲ್ಲಿ ಈ ರಸ್ತೆಯನ್ನು ತೆಗೆದುಕೊಳ್ಳಬೇಕು.

ಶ್ರೀ ಜಿ.ಎಸ್. ಬಾಗಲಕೋಟಿ.—ಈಗಾಗಲೇ ಈ ವಿಷಯದ ಬಗ್ಗೆ ಹೇಳಿದ್ದೇನೆ. ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗುತ್ತದೆ. ಈ ಬಗ್ಗೆ, ಆದಷ್ಟು ತೀವ್ರವಾಗಿ ಕೇಂದ್ರ ಸರಕಾರದ ಅನುಮತಿ ಪಡೆಯುವುದಕ್ಕೆ ಪ್ರಯತ್ನ ಮಾಡಲಾಗುತ್ತದೆ.

ಸೋಲಾರ್ ಘಟಕಗಳ ಸ್ಥಾಪನೆ

೧೦೮೬. ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).—ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಸೋಲಾರ ಘಟಕಗಳನ್ನು ಸ್ಥಾಪಿಸುವ ಮೂಲಕ (ಸೂರ್ಯ ಕಿರಣ ಶಾಖೋತ್ಪಾದನೆಯಿಂದ) ವಿದ್ಯುತ್ ಉತ್ಪಾದಿಸುವ ಸಲುವಾಗಿ ವಿವಿಧ ಸ್ಥಳಗಳಲ್ಲಿ ಸಮೀಕ್ಷೆ ಮಾಡುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ರಾಜ್ಯದಲ್ಲಿ ಯಾವ ಯಾವ ಕಡೆ ಸ್ಥಾಪಿಸಲು ಯೋಜಿಸಲಾಗಿದೆ,

ಇ) ಧಾರವಾಡ ಜಿಲ್ಲೆಯ ರೋಣ ತಾಲ್ಲೂಕಿನಲ್ಲಿ ಆರಿಸಿಕೊಂಡ ಸ್ಥಳ ಯಾವುದು,

ಈ) ಈ ಯೋಜನೆಯ ಅನುಷ್ಟಾನಕ್ಕೆ ಸರಕಾರದವರು ಕೈಗೊಂಡ ತೀವ್ರ ಕ್ರಮಗಳೇನು ?

ಶ್ರೀ ಲಕ್ಷ್ಮೀನರಸಿಂಹಯ್ಯ (ರಾಜ್ಯ ವಿದ್ಯುತ್ ಮಂತ್ರಿಗಳು).—

ಅ) ರಾಜ್ಯದಲ್ಲಿ ಸೋಲಾರ ಘಟಕಗಳನ್ನು ಸ್ಥಾಪಿಸಿ (ಸೂರ್ಯ ಕಿರಣ ಶಾಖೋತ್ಪನ್ನ) ವಿದ್ಯುತ್ ಉತ್ಪಾದಿಸಲು ಯಾವುದೇ ಸಮೀಕ್ಷೆಯನ್ನು ವಿದ್ಯುತ್ ಮಂಡಳಿ ನಡೆಸಿಲ್ಲ, ಆದರೆ ಅತಿ ಸಣ್ಣದಾದ, ಅರಣ್ಯ ಪ್ರದೇಶಗಳಲ್ಲಿರುವ, ವಿದ್ಯುತ್ ಲೈನ್‌ಗಳಿಂದ ಅತಿ ದೂರವಿದ್ದ ವಿದ್ಯುತ್ ಲೈನ್ ಹಾಕಲು ಅಸಾಧ್ಯ ಮತ್ತು ದುಬಾರಿಯಾಗುವ ೭೧ ಹಳ್ಳಿಗಳಲ್ಲಿ ಸೌರ ಶಕ್ತಿಯಿಂದ ಉರಿಯುವ ಬೀದಿ ದೀಪಗಳನ್ನು ಹಾಕಲಾಗಿದೆ.

ಆ) 'ಅ' ನ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಇ) ಧಾರವಾಡ ಜಿಲ್ಲೆಯ ರೋಣ ತಾಲ್ಲೂಕಿನಲ್ಲಿ ಇದುವರೆವಿಗೂ ಯಾವುದೂ ಇಲ್ಲ.

ಈ) 'ಆ'ನ ಉತ್ತರದಲ್ಲಿ ತಿಳಿಸಿರುವಂತಹ ಹಳ್ಳಿಗಳನ್ನು ಗುರುತಿಸಿ ಅವುಗಳಿಗೆ ಸೌರಶಕ್ತಿಯಿಂದ ಉರಿಯುವ ಬೀದಿ ದೀಪ ಹಾಕಲು ಯೋಜನೆಗಳನ್ನು ತಯಾರಿಸಲಾಗುತ್ತಿದೆ.

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ.—೭೧ ಹಳ್ಳಿಗಳಿಗೆ ಸೋಲಾರ್ ಬೀದಿ ದೀಪಗಳನ್ನು ಹಾಕುವ ಕೆಲಸ ನಡೆದಿದೆ ಎಂದು ಹೇಳುತ್ತಾರೆ. ಅದನ್ನು ಹಾಕಿದ್ದೀರಾ ಅಥವಾ ಹಾಕಿಲ್ಲವೇ ? ರೋಣ ತಾಲ್ಲೂಕಿನಲ್ಲಿ ಬಾರ್‌ಬಾರ್ ಗುಡ್ಡವೆಂದು ಇದೆ, ಅಲ್ಲಿಯೂ ಕೂಡ ಸೋಲಾರ್ ದೀಪ ಹಾಕಬೇಕೆಂಬ ಯೋಜನೆ ನಿಮ್ಮ ಬೋರ್ಡ್‌ನಲ್ಲಿ ಇದೆ ಎಂದು ಕೇಳಿದ್ದೇನೆ. ವಿದ್ಯುತ್ ಉತ್ಪಾದನೆಗೆ ಸೋಲಾರ್ ಘಟಕಗಳನ್ನು ಸ್ಥಾಪಿಸುವ ಸಲುವಾಗಿ ಸರ್ವೆ ಮಾಡಲು ಸರಕಾರ ಏನಾದರೂ ಆಲೋಚನೆ ಮಾಡಿದೆಯೆ? ಅಥವಾ ಬೋರ್ಡ್ ಏನಾದರೂ ಆಲೋಚನೆ ಮಾಡಿದೆಯೇ? ಇಲ್ಲವೇ ಇನ್ನು ಮೇಲಾದರೂ ಏನಾದರೂ ಆಲೋಚನೆ ಮಾಡುತ್ತೀರಾ ?

ಶ್ರೀ ಲಕ್ಷ್ಮೀನರಸಿಂಹಯ್ಯ.—ಸನ್ಮಾನ್ಯ ಅಧ್ಯಕ್ಷರೆ. ೭೧ ಹಳ್ಳಿಗಳಿಗೆ ಈಗಾಗಲೇ ನಾವು ೨೦೧ ರಷ್ಟು ಸೌರ ಶಕ್ತಿಯಿಂದ ಉರಿಯುವ ಬೀದಿ ದೀಪಗಳನ್ನು ಹಾಕಿದ್ದೇವೆ ಇನ್ನು ೧೮ ಹಳ್ಳಿಗಳಲ್ಲಿ ೯೯ ಬೀದಿ ದೀಪಗಳನ್ನು ಹಾಕುವ ಕಾರ್ಯ ಪ್ರಗತಿಯಲ್ಲಿದೆ. ಇಂಥ ಬೀದಿ ದೀಪ ಹಾಕಲೇಬೇಕಾದಂಥ ಪರಿಸ್ಥಿತಿ ಯಾವಾಗ ಬರುತ್ತದೆ ಎಂದರೆ ಲೈನ್ ಬಹಳ ದೂರದಲ್ಲಿರತಕ್ಕಂಥ ಮತ್ತು ಕಾಡಿನ ಮಧ್ಯೆ ಇರತಕ್ಕಂಥ ಹಳ್ಳಿಗಳಿಗೆ ಲೈನ್‌ಗಳನ್ನು ತೆಗೆದುಕೊಂಡು ಹೋಗತಕ್ಕಂಥದ್ದು ಬಹಳ ಕಷ್ಟವಾಗುತ್ತದೆ. ಅಂಥ ಕಡೆ ಮಾತ್ರ ಇದನ್ನು ಹಾಕುತ್ತೇವೆ. ಇದು ಪ್ರತಿಯೊಂದು ದೀಪಕ್ಕೂ ಸುಮಾರು ೧೨ ಸಾವಿರ ರೂಪಾಯಿ ಬೆಲೆ ಬರುತ್ತದೆ. ಆದರಲ್ಲಿ ಸುಮಾರು ೬ ಸಾವಿರ ರೂಪಾಯಿಯಷ್ಟು ಕೇಂದ್ರ ಸರ್ಕಾರದವರು ಸಬ್ಸಿಡಿ ರೂಪದಲ್ಲಿ ಕೊಡುತ್ತಾರೆ, ಇನ್ನು ಆರು ಸಾವಿರ ರೂಪಾಯಿ ನಮ್ಮದು ಖರ್ಚಾಗುತ್ತದೆ. ಆದರೂ ಕೂಡಾ ಅದನ್ನು ಮೆಂಟಿನೆನ್ಸ್ ಸರಿಯಾಗಿ ಮಾಡದೇ ಇದ್ದುದರಿಂದ ಅಷ್ಟು ಯಶಸ್ವಿಯಾಗಿ ಶಾಶ್ವತ